**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ** ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಪ್ರಮುಖ ಅಕ್ರಮ ಚಟುವಟಿಕೆಗಳಾದ ಇಸ್ಪೀಟ್ ದಂಧೆ, ಮಟ್ಕಾ, ಓ.ಸಿ., ಅಕ್ರಮ ಮರಳು ಮಾಫಿಯಾ ಹಾಗೂ ಡ್ರಗ್ಸ್/ಗಾಂಜಾ ಮಾಫಿಯಾ ಚಟುವಟಿಕೆಗಳು ದಿನೇ ದಿನೇ ಹೆಚ್ಚಾಗಿ ನಡೆಯುತ್ತಿದ್ದು, ತಾಲ್ಲೂಕಿನ ಯುವ ಜನತೆಯ ಮೇಲೆ ದುಷ್ಪರಿಣಾಮ ಬೀರುವ ಮೂಲಕ ಸಮಾಜದ ಸ್ವಾಸ್ಥ್ಯ ಹದಗೆಡುತ್ತಿರುವ ನಿಟ್ಟಿನಲ್ಲಿ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಕಠಿಣ ಕ್ರಮವಹಿಸುವ ಬಗ್ಗೆ.

**ಉತ್ತರ:** ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಪ್ರಮುಖ ಅಕ್ರಮ ಚಟುವಟಿಕೆಗಳಾದ ಇಸ್ಪೀಟ್ ದಂಧೆ, ಮಟ್ಕಾ, ಓ.ಸಿ., ಅಕ್ರಮ ಮರಳು ಮಾಫಿಯಾ ಹಾಗೂ ಡ್ರಗ್ಸ್/ಗಾಂಜಾ ಮಾಫಿಯಾ ಚಟುವಟಿಕೆಗಳನ್ನು ಹತ್ತಿಕ್ಕಲು ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗುತ್ತಿದ್ದು, ಪ್ರಕರಣಗಳ ಅಂಕಿ-ಅಂಶ ಕೆಳಗಿನಂತಿದೆ:-

| ಕ್ರಸ | ವರ್ಷ | ದಾಖಲಾದ ಇಸ್ಪೀಟ್ ಪ್ರಕರಣಗಳ ಸಂಖ್ಯೆ | ದಾಖಲಾದ ಮಟ್ಕಾ ಪ್ರಕರಣಗಳ ಸಂಖ್ಯೆ | ದಾಖಲಾದ ಅಕ್ರಮ ಮರಳು ಪ್ರಕರಣಗಳ ಸಂಖ್ಯೆ | ದಾಖಲಾದ ಡ್ರಗ್ಸ್/ಗಾಂಜಾ ಪ್ರಕರಣಗಳ ಸಂಖ್ಯೆ |
|---|---|---|---|---|---|
| ಸಸ1 | 2023 | 75 | 98 | 81 | 04 |
| 2 | 2024 | 78 | 110 | 62 | 07 |
| 3 | 2025 | 70 | 84 | 99 | 25 |
| 5 | 2026 | 05 | 07 | 05 | 03 |
| | ಒಟ್ಟು | 228 | 299 | 247 | 39 |

ಇಸ್ಪೀಟ್ ದಂಧೆ, ಮಟ್ಕಾ, ಓ.ಸಿ., ಅಕ್ರಮ ಮರಳು ಮಾಫಿಯಾ ಹಾಗೂ ಡ್ರಗ್ಸ್/ಗಾಂಜಾ ಮಾಫೀಯಾ ಚಟುವಟಿಕೆಗಳನ್ನು ತಡೆಗಟ್ಟಲು ಈ ಕೆಳಕಂಡಂತೆ ಕಾನೂನು ಕ್ರಮಕೈಗೊಳ್ಳಲಾಗುತ್ತಿದೆ:-

1) ಸಿಂಧನೂರು ತಾಲ್ಲೂಕ ವ್ಯಾಪ್ತಿಯಲ್ಲಿ ಈ ರೀತಿ ಪ್ರಕರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅದನ್ನು ಆಧರಿಸಿ ದಾಳಿ ಮಾಡಿ ಗಾಂಜಾ ಜಪ್ತಿ ಮಾಡಿ, ಪ್ರಕರಣಗಳನ್ನು ದಾಖಲಿಸಿಕೊಂಡು ಆರೋಪಿತರನ್ನು ದಸ್ತಗಿರಿ ಕ್ರಮಕ್ಕೆ ಒಳಪಡಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗುತ್ತದೆ.

2) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಮರಳು ಪ್ರಕರಣಗಳು, ಮಟ್ಕಾ, ಇಸ್ಪೀಟ್ ಜೂಜು ಪ್ರಕರಣಗಳಲ್ಲಿ ದಾಳಿ ಮಾಡಿ ಆರೋಪಿಗಳನ್ನು ದಸ್ತಗಿರಿ ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಂಡು ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲಾಗುತ್ತಿದೆ.

3) ಸಿಂಧನೂರು ತಾಲ್ಲೂಕಿನಲ್ಲಿ ಕಾನೂನು ಸುವ್ಯವಸ್ಥೆ ಹತೋಟಿಯಲ್ಲಿದ್ದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ವಹಿಸಲಾಗುತ್ತಿದೆ.

4) ಅಕ್ರಮ ಮರಳು ಸಾಗಣಿಕೆ ಮತ್ತು ಗಣಿಗಾರಿಕೆ ನಡೆಯದಂತೆ ಪ್ರತಿ ದಿನ ಠಾಣೆಯ ಸಿಬ್ಬಂದಿಯವರನ್ನು ನದಿ ತೀರ ಪ್ರದೇಶದ ಗ್ರಾಮಗಳಿಗೆ ಪಿಕೇಂಟಿಂಗ್ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ.

5) ಅಕ್ರಮ ಮರಳು ಸಾಗಣಿಕೆ ತಡೆಗಟ್ಟಲು ಸ್ಯಾಂಡ್ ಟಾಸ್ಕ್ ಫೋರ್ಸ್ ನಿರ್ಮಿಸಿ ಪ್ರತಿ ದಿನ ಗಸ್ತು ಕರ್ತವ್ಯ ನಿರ್ವಹಿಸಲಾಗುತ್ತಿದೆ.

6) ಸಂಶಯಯುತ ಗಾಂಜಾ ಮಾರುವಂತಹ ಮತ್ತು ಗಾಂಜಾ ಸೇವನೆ ಮಾಡುವಂತಹ ವ್ಯಕ್ತಿಗಳ ಮೇಲೆ ನಿರಂತರವಾಗಿ ನಿಗಾವಣೆ ಇಟ್ಟು ಪರಿಶೀಲಿಸಲಾಗುತ್ತಿದೆ.

7) ಈಗಾಗಲೇ ಗಾಂಜಾ ಪ್ರಕರಣದಲ್ಲಿ ಭಾಗಿಯಾದ ಆರೋಪಿತರ ಮೇಲೆ ಎಂಓಬಿ ಕಾರ್ಡ್ ಮತ್ತು ಕೆಲವು ವ್ಯಕ್ತಿಗಳ ಮೇಲೆ ರೌಡಿ ಹಾಳೆ ತೆರೆದು ಕಟ್ಟುನಿಟ್ಟಿನ ನಿಗಾವಣೆ ಇಡಲಾಗಿದೆ.

8) ಕಾಲ ಕಾಲಕ್ಕೆ ಠಾಣಾ ವ್ಯಾಪ್ತಿಗಳಲ್ಲಿ ಬಹಳಷ್ಟು ಕಡೆ ಜನ ಸಂಪರ್ಕಸಭೆ, ಶಾಲಾ ಕಾಲೇಜುಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡು ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ವ್ಯಸನದಿಂದ ಉಂಟಾಗುವ ದುಷ್ಪಾರಿಣಾಮಗಳಿಂದ ದೂರವಿರುವಂತೆ ಮತ್ತು ಮಾಹಿತಿ ನೀಡುವಂತೆ ತಿಳುವಳಿಕೆ ನೀಡಲಾಗಿರುತ್ತದೆ.

9) ಮದ್ಯ ವ್ಯಸನ ನಿರ್ಮೂಲನೆ ಕುರಿತು ಸಿಂಧನೂರು ನಗರದ ಎಂ.ಜಿ ವೃತ್ತದಿಂದ ಕುಷ್ಟಗಿ ರಸ್ತೆಯ ಸರ್ಕೂಟ್ ಹೌಸ್‌ವರೆಗೆ ವೈದ್ಯರ ತಂಡ, ಸರ್ಕಾರಿ ನೌಕರರು, ಸಂಘ ಸಂಸ್ಥೆಗಳು, ಮತ್ತು ವಿದ್ಯಾರ್ಥಿಗಳೊಂದಿಗೆ ಜಾಥಾ ಮಾಡಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಾಡಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ವೈದ್ಯರ, ತಹಶೀಲ್ದಾರರ ಮೂಲಕ ಮದ್ಯ, ವ್ಯಸನದ ನಿರ್ಮೂಲನೆ ಕುರಿತು ಅರಿವು ಮೂಡಿಸಲಾಗಿರುತ್ತದೆ, ಅಲ್ಲದೇ ವಿಜಯಕರ್ನಾಟಕ ಪತ್ರಿಕೆಯ ಪದಾಧಿಕಾರಿಗಳ ಸಹಯೋಗದೊಂದಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಿಂಧನೂರು ನಗರದಲ್ಲಿ ವಿವಿಧ ಬ್ಯಾನರ್‌ಗಳೊಂದಿಗೆ ಜಾಥಾ ನಡೆಸಿ ಅರಿವು ಮೂಡಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರು ಹಾಗೂ ಮಾನ್ಯ ಜಿಲ್ಲಾ ಪೊಲೀಸ್ ಅಧೀಕಕ್ಷರರವರು ಭಾಗವಹಿಸಿದ್ದು ಇರುತ್ತದೆ.

10) ಇತರೆ ಇಲಾಖೆಗಳೊಂದಿಗೆ ಸಮನ್ವಯತೆ ಮಾಡಿಕೊಂಡು ಅವರ ಸಹಕಾರ ಪಡೆದು ಗಾಂಜಾ ಸಾಗುವಳಿ, ಗಾಂಜಾ ಮಾರಾಟ, ಸಾಗಾಣಿಕೆ ಮತ್ತು ಗಾಂಜಾ ಸೇವನೆ ಬಗ್ಗೆ ತಳಮಟ್ಟದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಮತ್ತು ಠಾಣೆಗಳಿಗೆ ಭೇಟಿ ನೀಡುವ ಮುಖಂಡರುಗಳಿಗೆ ಮತ್ತು ಸಾರ್ವಜನಿಕರಿಗೆ ಈ ಕುರಿತು ಗುಪ್ತ ಮಾಹಿತಿ ನೀಡುವಂತೆ ಕೋರಲಾಗುತ್ತಿದೆ. ಅಲ್ಲದೇ ಬೀಟ್ ಸಿಬ್ಬಂದಿಗಳಿಗೆ ಅವರವರ ಏರಿಯಾದಲ್ಲಿ ಮಾಹಿತಿ ಸಂಗ್ರಹಿಸಿ, ದಾಳಿ ಮಾಡಿಸುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

11) ಡ್ರಗ್ಸ್ ಪ್ರಕರಣಗಳ ಕುರಿತಂತೆ ಮಾಹಿತಿ ಪಡೆಯಲು ಮತ್ತು ನೀಡಲು ಸಾರ್ವಜನಿಕರಿಗೆ, ಬಾತ್ಮೀದಾರರಿಗೆ ಮತ್ತು ಬೀಟ್ ಸಿಬ್ಬಂದಿಗಳಿಗೆ ತಿಳಿಸಲಾಗಿರುತ್ತದೆ. ಆದಾಗ್ಯೂ ಆಗಾಗ್ಗೆ ಮೆಡಿಕಲ್ ಶಾಪ್‌ಗಳ ಮೇಲೆ ಮತ್ತು ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಅಲ್ಲದೇ ಜಿಲ್ಲಾಡಳಿತದ ವತಿಯಿಂದಲೂ ಡ್ರಗ್ಸ್ ಕಂಟ್ರೋಲ್ ಬೋರ್ಡ್‌ನ ಅಧಿಕಾರಿಗಳು ಕೆಲವು ಮೆಡಿಕಲ್ ಶಾಪ್‌ಗಳನ್ನು ಚೆಕ್ ಮಾಡಿರುತ್ತಾರೆ. ಅಲ್ಲದೇ ಮೆಡಿಕಲ್ ಶಾಪ್‌ಗಳ ಮಾಲೀಕರನ್ನು ಕರೆದು ಸೂಚನೆಗಳನ್ನು ನೀಡಲಾಗಿರುತ್ತದೆ.

12) ಗಾಂಜಾ ಸೇವಿಸಿದವರ ಪತ್ತೆ ಕುರಿತು ಗಾಂಜಾ ಸೇವನೆ ಪರಿಶೀಲನಾ ಕಿಟ್‌ಗಳನ್ನು ಪ್ರತ್ಯೇಕವಾಗಿ ತರಿಸಿ ಗಾಂಜಾ ಸೇವಿಸಿದವರ ಪರೀಕ್ಷೆ ಮಾಡಿಸಿ, ಸೇವನೆ ಕಂಡು ಬಂದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿರುತ್ತದೆ.

13) ಅಕ್ರಮ ಮರಳು ಸಾಗಾಟಕ್ಕೆ ಸಂಬಂಧಿಸಿದಂತೆ ಇತರೆ ಕೆಲಸದ ಒತ್ತಡಗಳಲ್ಲಿಯೂ ಮೇಲ್ಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ. ಸಿಂಧನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಮೂರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪರವಾನಿಗೆ ಪಡೆದ ಸ್ಟಾಕ್ ಯಾರ್ಡ್‌ಗಳಿದ್ದು, ಇದರಿಂದ ರಾಯಲ್ಟಿ ಪಡೆದು ಮರಳು ಸಾಗಾಟ ನಡೆಯುತ್ತಿದ್ದು, ಆದಾಗ್ಯೂ ಇದನ್ನು ತಪ್ಪಿಸಿ ಅಕ್ರಮ ಸಾಗಾಟ ಮಾಡಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಅಲ್ಲದೇ ಅಕ್ರಮ ಮರಳು ಸಂಗ್ರಹದ ವಿರುದ್ಧ ದಾಳಿ ಮಾಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಮಾಹಿತಿ ನೀಡಿ ದಾಳಿ ಮಾಡಿಸಲಾಗಿರುತ್ತದೆ. ಹೆಚ್ಚುವರಿ ತೂಕ ಸಾಗಾಟ ಮಾಡುವವರ ವಿರುದ್ಧವೂ ಕ್ರಮ ಕೈಗೊಂಡು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ದಂಡ ವಿಧಿಸಲಾಗಿರುತ್ತದೆ.

14) ಅರಣ್ಯ, ಕಂದಾಯ, ಲೋಕೋಪಯೋಗಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಇತರೆ ಇಲಾಖೆಗಳಿಗೆ ಅಗತ್ಯ ಸಹಕಾರವನ್ನು ಒದಗಿಸಿ ಯಾವುದೇ ಅಕ್ರಮ ಮರಳು ಸಾಗಾಣಿಕೆ ನಡೆಯದಂತೆ ಕ್ರಮ ಕೈಗೊಳ್ಳಲಾಗುತ್ತಿದೆ,.

15) ಸಕ್ಷಮ ಪ್ರಾಧಿಕಾರ ಅನುಮತಿ ಪಡೆದು ಮರಳು ಸಾಗಿಸುವ ವಾಹನಗಳನ್ನು ನಿಯಮಿತವಾಗಿ ತಪಾಸಣೆ ಮಾಡಿ, ನಕಲಿ ಪರ್ಮಿಟ್‌ಗಳನ್ನು ಪಡೆದು ಮರಳನ್ನು ಸಾಗಿಸುವ ವಾಹನಗಳ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳುವ ಕುರಿತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯೊಂದಿಗೆ ನೈಜತೆಯ ಕುರಿತು ಮಾಹಿತಿ ಪಡೆಯಲಾಗುತ್ತಿದೆ, ಮತ್ತು ಅವರಿಗೂ ಕೂಡ ಈ ಕುರಿತು ತಪಾಸಣೆ ಮಾಡುವಂತೆ ಕೋರಲಾಗಿದೆ.

16) ಚೆಕ್‌ಪೋಸ್ಟ್‌ಗಳಲ್ಲಿ ನಿರಂತರವಾಗಿ ಸಿಬ್ಬಂದಿಗಳನ್ನು ನೇಮಿಸಿ ವಾಹನಗಳನ್ನು ತಪಾಸಣೆ ಮಾಡಿ ಮರಳು ಸಾಗಾಣಿಕೆಯಾಗುತ್ತಿದ್ದು ಕಂಡು ಬಂದಲ್ಲಿ ಕೂಡಲೇ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

---

ಹೆಚ್‌ಡಿ 44 ಎಸ್‌ಎಸ್‌ಟಿ 2026

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು.